


# ನವರಾತ್ರಿಯ ಬೆಳಕು

ವರ್ಷ ಋತುವಿನ ಅಬ್ಬರ ಇಳಿದಿರುತ್ತದೆ. ಶರತ್ಕಾಲದ ಹಿತಕರ ತಂಗಾಳಿ ನಾಡಿನ ಎಲ್ಲೆಡೆ ಪಸರಿಸುತ್ತದೆ. ಪ್ರಸನ್ನಳಾದ ಪ್ರಕೃತಿಮಾತೆ ಎಲ್ಲ ವರ್ಷಗಳಂತೆ, ಜಗತ್ತಿನೆಲ್ಲೆಡೆ ಪೂಜಿಸಲ್ಪಡುವ ಜಗನ್ಮಾತೆಯ ಆಗಮನಕ್ಕೆ ಸಡಗರದಿಂದ ಅಣಿಯಾಗುತ್ತಾಳೆ. ಎಲ್ಲೆಡೆ ತುಂಬಿ ತುಳುಕುವ ನದಿ, ಕೆರೆ, ಬಾವಿ, ಸರೋವರಗಳು; ಹಚ್ಚ ಹಸುರಿನ ಸಸ್ಯಸಮೃದ್ಧಿ; ಹೊಲಗದ್ದೆಗಳಲ್ಲಿ ಮೈದುಂಬಿ ನಿಂತ ಭತ್ತ, ರಾಗಿ, ಜೋಳವೇ ಮುಂತಾದ ಧಾನ್ಯಗಳು. ಭಗವತಿಯ ಆರಾಧನೆಗೆ ಸಕಲವೂ ಅನುಕೂಲಕರವೆಂಬಂತೆ ಭಾಸವಾಗುವುದು. ಪ್ರಪಂಚದ ಕೋಲಾಹಲಗಳ ನಡುವೆ ನವರಾತ್ರಿಯ ಆಚರಣೆ ಹಬ್ಬವೂ ಹೌದು, ಪೂಜೆಯೂ ಹೌದು. ಹೋಳಿ, ದೀಪಾವಳಿಗಳಂತೆ ಕುಣಿದು ಕುಪ್ಪಳಿಸುವ ಉಲ್ಲಾಸ ಇಲ್ಲಿ ಇಲ್ಲದಿರಬಹುದು; ಆದರೆ ಇಲ್ಲಿ ಸಕಲ ವಯೋಮಾನದವರಿಗೂ ಒಂದಲ್ಲ ಒಂದು ಕಾರಣಕ್ಕೆ ಮುದಗೊಳ್ಳುವ ಸನ್ನಿವೇಶಗಳಿವೆ. ಶ್ರದ್ಧಾಳುಗಳು ಪಾರಾಯಣ, ಪೂಜೆ, ಭಕ್ತಿ-ಭಾವಗಳಲ್ಲಿ ಮುಳುಗುತ್ತಾರೆ. ಮಕ್ಕಳು ಹಾಗೂ ಯುವಕರು ಹಿರಿಯರ, ಹೆತ್ತವರ ಜೊತೆಗೆ ಸೇರಿಕೊಂಡು ಹಬ್ಬವನ್ನಾಚರಿಸುತ್ತಾರೆ. ದಸರೆಯ ವಸ್ತು ಪ್ರದರ್ಶನ, ರಜಾದಿನದ ಸಂಭ್ರಮ ಇತ್ಯಾದಿಗಳಿಂದ ಅವರಿಗೂ ಹೇಳಲಾಗದ ಆನಂದ. ಇಳಿವಯಸ್ಸಿನ ಅಜ್ಜ-ಅಜ್ಜಿಯರಿಗಂತೂ ಗತಕಾಲದ ಹಲವು ಕ್ಷಣಗಳನ್ನು ನೆನಪಿಸುತ್ತಾ, ವರ್ತಮಾನದ ಸಂಭ್ರಮದಲ್ಲಿ ಭಾಗಿಯಾಗುವ ತವಕ. ವಿವಿಧ ದೇಗುಲಗಳು, ಆಧ್ಯಾತ್ಮಿಕ ಕೇಂದ್ರಗಳು, ಸಂಘ-ಸಂಸ್ಥೆಗಳು ನವರಾತ್ರಿಯ ಆಚರಣೆಗಾಗಿ ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಎಲ್ಲರ ಎದೆಯೊಳಗೆ ಮುಂಬರುವ ಉಲ್ಲಾಸದ ದಿನಗಳಿಗಾಗಿ ತವಕ.

## ಅಲೌಕಿಕ ಸೊಬಗಿನ ಕ್ಷಣಗಳು

ಯವ ಹಬ್ಬವೇ ಇರಲಿ, ವಿಶೇಷ ದಿನಗಳೇ ಇರಲಿ — ಅದಕ್ಕೊಂದು ದಿವ್ಯತೆಯ ಸ್ಪರ್ಶವಿಲ್ಲದೆ ಇದ್ದರೆ ಭಾರತೀಯರಾದ ನಮಗೆ ಅದು ಅರ್ಥಹೀನ. ನವರಾತ್ರಿಯೋ! ಎಲ್ಲ ಅಲೌಕಿಕ ಸಂಗತಿಗಳೂ ಅಲ್ಲಿ ಮಡುಗಟ್ಟುತ್ತವೆ. ದುಷ್ಟ ಅಸುರರ ಸಂಹಾರದ ಪೌರಾಣಿಕ ಕಥೆ ಹಿನ್ನೆಲೆಯಾಗಿದ್ದುಕೊಂಡು, ಶ್ರೀದೇವಿಯ ನವರಾತ್ರಿಗಳಲ್ಲಿ ಕತ್ತಲೆಯ ಹಿನ್ನೆಲೆಯಲ್ಲಿ ಉಜ್ಜ್ವಲ ಬಂಗಾರದಂತೆ ಬೆಳಗುತ್ತಾಳೆ. ಮಹಿಷಾಸುರ, ಚಂಡ-ಮುಂಡ, ರಕ್ತಬೀಜನೇ ಮೊದಲಾದ ಉಗ್ರ ರಾಕ್ಷಸರನ್ನು ವಧೆಗೈದ ಜಗನ್ಮಾತೆ ವೀರ, ರೌದ್ರ ಭಾವಗಳನ್ನು ವಿಜೃಂಭಿಸುತ್ತ ನಿಲ್ಲುವ ಅಸಾಧಾರಣ ಮೂರ್ತಿಯಾಗಿದ್ದಾಳೆ. ಇದರ ಹಿಂದಿರುವ ದೈವೀ ಅವತರಣದ ತತ್ತ್ವ, ಶಕ್ತಿಸ್ವರೂಪಿಣಿ ಮಾತೆಯ ಆವಿರ್ಭಾವ, ದುಷ್ಟಸಂಹಾರ-ಶಿಷ್ಟರಕ್ಷಣ ಕಾರ್ಯದ ಸಾಹಸಗಾಥೆ ಭಕ್ತಜನರ ಹೃದಯದಂಗಳದಲ್ಲಿ ಪ್ರತಿ ವರ್ಷದಂತೆ ಮತ್ತೆ ವೈಭವದಿಂದ ಮೈದೋರುತ್ತವೆ. ನೃತ್ಯ, ನಾಟಕ, ಯಕ್ಷಗಾನ, ಸಂಗೀತಗಳ ಮೂಲಕ ಎಲ್ಲರ ಹೃದಯದಲ್ಲಿ ಅಡಗಿ ಕುಳಿತ ಪ್ರತಿಭೆ ಹೊಸ ಹೊಸ ಅಭಿವ್ಯಕ್ತಿಗಳಾಗಿ ಮಾರ್ಪಡುತ್ತವೆ.

ಹಲವರು ಈ ದಿವ್ಯ ಕ್ಷಣಗಳನ್ನು ಅರಿತು ಅನುಭವಿಸುತ್ತಾರೆ; ಅನೇಕರು ಅರಿಯದಿದ್ದರೂ, ಅವರ ಮೈ, ಮನ ಹೃದಯಗಳು ವಿವಿಧ ಕ್ರಿಯೆಗಳ ಮೂಲಕ ಎಲ್ಲವನ್ನೂ ಅನುಭವಿಸುತ್ತವೆ. ವಿಶ್ವವೆಲ್ಲವೂ ಸಡಗರ-ಸಂಭ್ರಮದಿಂದ ಬೇರೆಯೇ ಪ್ರಪಂಚದಲ್ಲಿರುವಂತೆ ನವರಾತ್ರಿಯನ್ನು ಆಚರಿಸುತ್ತಿರುವಾಗ, ನಡುವೆ ಶೂನ್ಯತೆಯನ್ನು ಅನುಭವಿಸುವ ವೈಯಕ್ತಿಕರು ಯಾರು? ಹೊಸ ಮಳೆಯ ಭೋರ್ಗರೆತಕ್ಕೆ ನದಿ ಉಕ್ಕಿ ಹರಿದಾಗ, ಯಾವುದೇ ಒಂದು ಹನಿ ‘ನಾನಿಲ್ಲಿಂದ ಕದಲಲಾರೆ’ ಎಂದು ಹಠ ಹಿಡಿದು ಕುಳಿತರೆ ನದಿ ಕೇಳುತ್ತದೆಯೆ? ಪ್ರವಾಹದಲ್ಲಿ ಎಲ್ಲವೂ ಒಂದಾಗುತ್ತದೆ. ಹೀಗೆ ನವರಾತ್ರಿಯಂತಹ ಹಬ್ಬದ ಆಚರಣೆ ಸಮಾಜದಲ್ಲಿ ಹಾಸುಹೊಕ್ಕಾಗಿದೆ; ಸರ್ವತ್ರ ವ್ಯಾಪಕವಾಗಿದೆ. ಸಂದೇಹದ ಪ್ರಶ್ನೆಗಳಿಗೆ ಕೊನೆಯಿಲ್ಲ: ನಾಸ್ತಿಕರು, ಅನ್ಯಧರ್ಮೀಯರು, ಧರ್ಮರಹಿತರು — ಇವರಿಗೆಲ್ಲ ಇಂಥ ಹಬ್ಬಗಳು ಏನು ಮಾಡಬಲ್ಲದು? ನಿಜ, ಅವರು ತಟಸ್ಥರಾಗಿರಬಹುದು, ಅಥವಾ, ‘ನನಗೂ ಇವಕ್ಕೂ ಸಂಬಂಧವಿಲ್ಲ’ ಎಂದು ಅವರು ನಿರ್ಲಕ್ಷ್ಯ ತಾಳಬಹುದು. ಆದರೆ, ಇಡೀ ಜಗತ್ತೇ ಕುಣಿಯುತ್ತಿರುವಾಗ ಅಚ್ಚರಿಯಿಂದ ನೋಡುವ ವೀಕ್ಷಕರಂತೆ ಅವರೂ ಅಚ್ಚರಿಯಿಂದ ನೋಡುತ್ತ ನಿಲ್ಲಬಹುದು. ಅದೂ ಒಂದು ಬಗೆಯಲ್ಲಿ ಭಾಗವಹಿಸಿದಂತೆ. ಎಲ್ಲಿ ನಾವು ಜಗತ್ತಿನೊಂದಿಗೆ ಒಂದಾಗುವೆವೋ, ಅಲ್ಲಿ ಜಗತ್ತಿನ ಪ್ರತಿಯೊಂದಕ್ಕೂ ನಾವು ಮಿಡಿಯುತ್ತೇವೆ. ಇದು ಪ್ರಪಂಚದ ನಿಯಮ. ಯಾರಿಗೆ ಹಬ್ಬ, ಆಚರಣೆ, ಆರಾಧನೆಗಳು ಜೀವನದ ಅಂಗವಾಗಿದೆಯೋ ಅವರಿಗೆ ಮಾತ್ರ

ಅದರ ಸಂಭ್ರಮ ಅನ್ವಯಿಸುತ್ತದೆ. ಈ ಅರ್ಥದಲ್ಲೇ ಈ ಎಲ್ಲ ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ.

## ಶ್ರದ್ಧೆ-ಭಕ್ತಿಗಳ ಪ್ರತೀಕ

ಧಾರ್ಮಿಕ, ಆಧ್ಯಾತ್ಮಿಕ ಜೀವನವು ಕೇವಲ ವೈಯಕ್ತಿಕವೆನ್ನುವವರಿದ್ದಾರೆ. ಆದರೆ ಭಾರತದಲ್ಲಿ ಅಂತಹ ಸೀಮಿತ ದೃಷ್ಟಿ ಅವಾಸ್ತವಿಕವಾಗುತ್ತದೆ. ಧರ್ಮ, ಅಧ್ಯಾತ್ಮಗಳ ಒಂದು ಕೊಂಡಿ ವೈಯಕ್ತಿಕವೇನೋ ನಿಜ; ಆದರೆ ಅಂಥ ವೈಯಕ್ತಿಕತೆ ಒಂದಲ್ಲ ಒಂದು ರೀತಿ ಸದಾ ಸಾರ್ವತ್ರಿಕದೊಂದಿಗೆ ವ್ಯವಹರಿಸುತ್ತಲೇ ಇರುತ್ತದೆ. ಇದಕ್ಕೆ ಸೂಕ್ತ ಉದಾಹರಣೆ : ದೇವಾಲಯದಲ್ಲಿ ದೇವರ ದರ್ಶನ. ಬೆಳಿಗ್ಗೆ ಎದ್ದು, ಸ್ನಾನಾದಿಗಳನ್ನು ಮುಗಿಸಿ ಶುಚಿರ್ಭೂತರಾಗಿ, ಹೂ-ಹಣ್ಣು ಇತ್ಯಾದಿಗಳೊಂದಿಗೆ ದೇವಾಲಯಕ್ಕೆ ಹೋಗುತ್ತೇವೆ. ದೇವರ ಮುಂದೆ ನಿಂತು ಪ್ರಾರ್ಥಿಸುವ ಆ ಕ್ಷಣ ಅತ್ಯಂತ ಅಲೌಕಿಕ, ಅಸಾಧಾರಣ. ಇದನ್ನು ವೈಯಕ್ತಿಕವೆನ್ನಬೇಕೆ? ಸಾರ್ವತ್ರಿಕವೆನ್ನಬೇಕೆ? ಈ ವಿಂಗಡನೆಯೇ ಅತ್ಯಂತ ಅಸ್ವಭಾವಿಕವೆನ್ನಬೇಕು. ದೇವಾಲಯವೆಂಬ ಕಲ್ಪನೆಯೇ ಸಾರ್ವತ್ರಿಕ. ಎಲ್ಲ ಜನರೂ ಅಲ್ಲಿಗೆ ಬರುತ್ತಾರೆ, ನಮಸ್ಕರಿಸುತ್ತಾರೆ, ತೆಂಗಿನಕಾಯಿ ಒಡೆಯುತ್ತಾರೆ; ದೇವರಿಗೆ ಹೂ-ಹಣ್ಣುಕೊಟ್ಟು ಪ್ರಸಾದ ಸ್ವೀಕರಿಸುತ್ತಾರೆ. ಎಲ್ಲರ ಜೊತೆಗೆ ಸೇರಿಕೊಂಡು, ಎಲ್ಲರ ಮುಂದೆ ನಿಂತು, ಎಲ್ಲರಂತೆ ಇವುಗಳನ್ನು ಆಚರಿಸುವಾಗ ನಾನು ಎಷ್ಟರ ಮಟ್ಟಿಗೆ ವೈಯಕ್ತಿಕ? ಅಂತೆಯೇ, ಒಂದು ಮೂಲೆಯಲ್ಲಿ ಕಣ್ಣುಮುಚ್ಚಿ ಕುಳಿತು, ಕೆಲವು ಕ್ಷಣ ದೇವರನ್ನೇ ಚಿಂತಿಸುತ್ತ ಧ್ಯಾನಿಸುವಾಗ ಅದು ಸಂಪೂರ್ಣ ವೈಯಕ್ತಿಕ; ಅಲ್ಲಿ ಸಾರ್ವತ್ರಿಕವೆಲ್ಲಿ ಬಂತು? ಈ ಎರಡೂ ಕ್ರಿಯೆಗಳನ್ನು ಪ್ರತಿಯೊಬ್ಬರೂ ಮಾಡುತ್ತಾರೆ. ಇಲ್ಲಿ ನನ್ನ ಇಷ್ಟು ಪಾಲು ವೈಯಕ್ತಿಕ, ಇಷ್ಟುಪಾಲು ಸಾರ್ವತ್ರಿಕ ಎನ್ನಲಾದೀತೆ? 'ನಾನು' ಒಂದು ಪೂರ್ಣ ಘಟಕ; ಆಂಶಿಕವಲ್ಲ. ಧ್ಯಾನಿಸುವಾಗಲೂ ನಾನು ಭೌತಿಕವಾಗಿ ಈ ಪ್ರಪಂಚದ ನಡುವೆಯೇ ಕುಳಿತಿದ್ದೇನೆ. ಅದೇ ರೀತಿ ಹಣ್ಣುಕಾಯಿ ಒಡೆಯುವಾಗಲೂ ನನ್ನ ಆ 'ವೈಯಕ್ತಿಕ' ನಾನು ಭಕ್ತಿ-ಭಾವವನ್ನು ಹೊಂದಿದ್ದರೆ, ಸಾರ್ವತ್ರಿಕದಲ್ಲಿ ಅದು ಒಂದಾಗಿದೆ. ಹೀಗೆ ಅಧ್ಯಾತ್ಮ, ಧರ್ಮಗಳು ಸಾರ್ವತ್ರಿಕ-ವೈಯಕ್ತಿಕ ಎರಡೂ ಆಗಿವೆ. ಪ್ರತ್ಯೇಕವಾಗಿ ನೋಡುವಾಗ ಮಾತ್ರ ಅದು ವಿಭಿನ್ನವಾಗಿರುವಂತೆ ಕಾಣಿಸುತ್ತದೆ. ಆಂಶಿಕ ದೃಷ್ಟಿಯಿಂದ ಒಂದು ಸಂಗತಿಯನ್ನು ಗಮನಿಸುವುದು ದೃಷ್ಟಿದೋಷವಲ್ಲವೆ?

ನವರಾತ್ರಿ ಹಬ್ಬವು ಎಲ್ಲ ದೃಷ್ಟಿಗಳಿಂದಲೂ ಒಂದು ಸಾರ್ವತ್ರಿಕವಾದ ಹಬ್ಬ. ಅಲ್ಲಿ ಆರಾಧನೆಯಿದೆ, ಆಚರಣೆಯಿದೆ, ಆಧ್ಯಾತ್ಮಿಕ ಸಾಧನೆಯಿದೆ, ಎಲ್ಲದರ ಹಿಂದೆ ಆಳವಾದ ತತ್ತ್ವ-ದರ್ಶನವಿದೆ. ಇದರೊಂದಿಗೆ ಜನಸಾಮಾನ್ಯರ ಜೀವನದೊಂದಿಗೆ ಬೆಸೆದುಕೊಂಡಿರುವ ವ್ಯಾಪಾರ-ವಾಣಿಜ್ಯ, ಕಲೆ-ಸಾಹಿತ್ಯ, ಸಂಗೀತ-ನೃತ್ಯ, ಆಚಾರ-ವಿಚಾರ, ಪರಂಪರಾಗತ ನಡವಳಿಕೆಗಳು, ಈ ಹಬ್ಬದ ವ್ಯಾಪಕತೆಯನ್ನು ಹೆಚ್ಚಿಸಿವೆ. ಒಂದು ದೇವಾಲಯವು ಹೇಗೆ ಒಂದು ಊರಿನ ಇಡೀ ಜೀವನಕ್ರಮವನ್ನೇ ರೂಪಿಸುವುದೋ, ಅದೇ ರೀತಿ, ನವರಾತ್ರಿ ಹಬ್ಬವು ಒಟ್ಟು ಜನಜೀವನದ ಒಂದು ಕಾಲಾವಧಿಯನ್ನು ಭಕ್ತಿಭಾವಗಳಿಂದ ತುಂಬಿಕೊಂಡ ಒಂದು ಸಂದರ್ಭವಾಗಿ ಪರಿವರ್ತಿಸುವುದು. ದೇಗುಲದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುವ ಮೂರ್ತಿಯೇ ಎಲ್ಲ ಚಟುವಟಿಕೆಗಳ ಕೇಂದ್ರಬಿಂದು; ನವರಾತ್ರಿ ಹಬ್ಬದಲ್ಲಿ ದುರ್ಗಾಮಾತೆಯೇ ಕೇಂದ್ರಬಿಂದು. ದೇಗುಲದಲ್ಲಿ ಅರ್ಚಕರಿಂದ ಹಿಡಿದು ಹೂ-ಹಣ್ಣು ಮಾರುವವರು, ವಿವಿಧ ಧಾರ್ಮಿಕ ವಸ್ತುಗಳ ಅಂಗಡಿಗಳನ್ನು ಇಟ್ಟುಕೊಂಡು ಮಾರಾಟ ಮಾಡುವವರು, ಬಂದ ಯಾತ್ರಿಕರನ್ನು ತಮ್ಮತ್ತ ಸೆಳೆದು ದೇವಾಲಯದ ಚಿತ್ರಪಟವನ್ನು ಮಾರುವ ಬೀದಿ ವ್ಯಾಪಾರಿಗಳು, ಊರಿಗೆ ಬರುವ ವಾಹನಗಳು, ಅಲ್ಲಿನ ಆಡಳಿತ ಮಂಡಳಿ — ಹೀಗೆ ಎಲ್ಲವೂ ದೇವಾಲಯದ ಚಟುವಟಿಕೆಗಳಲ್ಲಿ ಸಕ್ರಿಯರಾಗುತ್ತಾರೆ. ಎಲ್ಲರ ಕೇಂದ್ರಬಿಂದುವೇ ಅಲ್ಲಿಗೆ ಬರುವ ಜನರ ಶ್ರದ್ಧಾಭಕ್ತಿಗಳು. ಅದೇ ರೀತಿ, ದುರ್ಗಾಮಾತೆಯ ದಿವ್ಯಚರಿತೆಯನ್ನು ಅವಲಂಬಿಸಿ ಆಚರಿಸಲಾಗುತ್ತಿರುವ ನವರಾತ್ರಿ ಹಬ್ಬದಲ್ಲಿ ಪಾಲ್ಗೊಳ್ಳುವ ವರ್ತಕರು, ಕಾರ್ಯಕ್ರಮಗಳನ್ನು ನಡೆಸುವವರು, ಕಲಾವಿದರು, ವಸ್ತು ಪ್ರದರ್ಶನಗಳು, ಸಮೂಹ ಮಾಧ್ಯಮಗಳು — ಹೀಗೆ ಎಲ್ಲರ ಕೇಂದ್ರಬಿಂದು ಜನಸಾಮಾನ್ಯರ ಶ್ರದ್ಧಾಭಕ್ತಿಗಳೇ ಆಗಿವೆ. ಈ ಹಬ್ಬ-ಹರಿದಿನಗಳ ವೈಭವ, ಸಡಗರ, ಸ್ಫೂರ್ತಿಗಳೇ ನಮ್ಮ ಸಂಸ್ಕೃತಿಯನ್ನು ಮುನ್ನಡೆಸುವ ಶಕ್ತಿಯಾಗಿ ಕೆಲಸ ಮಾಡುತ್ತದೆ.

## ವಿಷಮ ದಿನಗಳಲ್ಲಿ

ಪ್ರಪಂಚದಲ್ಲಿ ಜೀವನವು ಒಂದೇ ರೀತಿಯಲ್ಲಿ, ಸರಳ ರೇಖೆಯಂತೆ ಸಾಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ, ಒಟ್ಟು ಸಮಾಜದ ಜೀವನದಲ್ಲೂ ಏರುಪೇರುಗಳು ಅನಿವಾರ್ಯ. ಎಲ್ಲ ಚೆನ್ನಾಗಿರುತ್ತಿದ್ದಂತೆ ಏನೋ ಒಂದು ಅನಾಹುತವಾಗಿಬಿಡುತ್ತದೆ. ಊಹಿಸಲೂ ಸಾಧ್ಯವಾಗದಂಥ ಹಾನಿಗೆ ಜನರು ಒಳಗಾಗುತ್ತಾರೆ. ಪ್ರಕೃತಿವಿಕೋಪ, ಗಲಭೆ, ಸಾಮಾಜಿಕ ಅಸಮಾನತೆ, ಯಾರ ಅರಿವಿಗೂ ಬಾರದೆ ಉಂಟಾಗುವ ಸಾಮಾಜಿಕ-ಆರ್ಥಿಕ ಪರಿವರ್ತನೆಗಳು, ವೈಚಾರಿಕ-ವೈಜ್ಞಾನಿಕ ಬದಲಾವಣೆಗಳು — ಇವುಗಳ ನಡುವೆ ಬದುಕು ನಿರಂತರ ನಡೆಯುತ್ತದೆ. ಇದರ ಪರಿಣಾಮ ಅನೇಕ ಬಾರಿ ಹಿತಕರವಾಗಿರುವುದಿಲ್ಲ. ದಾರುಣ ಘಟನೆಗಳಿರುವಂತೆಯೇ ಅಚ್ಚರಿಯ, ವಿಸ್ಮಯದ ಲಾಭದಾಯಕ ಸಂಗತಿಗಳೂ ಇರುತ್ತವೆ. ಈ ಏರುಪೇರುಗಳ ನಡುವೆ ನಾವು ಸಾಧಿಸಿಕೊಳ್ಳಬೇಕಾದ ಸಮತೋಲನವನ್ನು ನೆನಪಿಸುವ ಒಂದು ಅಪೂರ್ವ ಅವಕಾಶವೇ ಹಬ್ಬಹರಿದಿನಗಳು.

ಬೇವು-ಬೆಲ್ಲವನ್ನು ಹಂಚುವ ಯುಗಾದಿಯ ಹಬ್ಬವೇ ಇದಕ್ಕೆ ಅತ್ಯುತ್ತಮ ಉದಾಹರಣೆ. ನವರಾತ್ರಿ ಹಬ್ಬದ ಸಂದರ್ಭದಲ್ಲಿ ಈ ಸಮತೋಲನವನ್ನು ಕಂಡುಕೊಳ್ಳುವ ಕಾರ್ಯ ಹೇಗೆ ನಡೆಯುವುದು ಎಂಬುದನ್ನು ನೋಡೋಣ.

## ದ್ವಂದ್ವ ಬದುಕನ್ನು ಮೀರಿ

ರೈತರ ಜೀವನ ಸಹಜವಾಗಿಯೇ ಹಲವು ಏರುಪೇರುಗಳಿಂದ ಕೂಡಿರುತ್ತದೆ. ನೀರನ್ನೇ ಅವಲಂಬಿಸಿ ಕೃಷಿಯನ್ನು ಮಾಡುತ್ತಾರೆ; ಸಮೃದ್ಧವಾಗಿ ಬೆಳೆಯಾದರೂ ಕೂಡ ಅದಕ್ಕೆ ಸರಿಯಾದ ಬೆಲೆ ಸಿಕ್ಕಿದರೆ ಮಾತ್ರ ಕೃಷಿಕನಿಗೆ ಲಾಭ ಬರುತ್ತದೆ. ಇದರ ನಡುವೆ ನೆರೆಹಾವಳಿ, ಬರ, ಬೆಳೆಗೆ ರೋಗ ತಗಲಿ ಉಂಟಾಗುವ ಹಾನಿ — ಇತ್ಯಾದಿ ತೊಂದರೆಗಳೂ ಇಲ್ಲದಿಲ್ಲ. ಒಂದು ಬಾರಿ ಒಬ್ಬ ರೈತನಿಗೆ ಸಮೃದ್ಧವಾದ ಬೆಳೆಯಾಗಿ, ಅವನು ಚೆನ್ನಾಗಿ ಲಾಭ ಗಳಿಸಿದ ಎಂದಿಟ್ಟುಕೊಳ್ಳೋಣ. ಅವನ ಕುಟುಂಬ, ಪರಿಸರ ಎಲ್ಲೆಲ್ಲೂ ಅವನು ಸಮೃದ್ಧಿಯನ್ನೇ ಕಾಣುತ್ತಾನೆ. ಈ ಬಾರಿ ನವರಾತ್ರಿಯನ್ನು ಅದ್ದೂರಿಯಿಂದ ಆಚರಿಸಬೇಕು ಎಂದುಕೊಳ್ಳುತ್ತಾನೆ. ಮನೆಯನ್ನು ಸಿಂಗರಿಸುವುದು, ಬಂಧು-ಮಿತ್ರರನ್ನು ಆಹ್ವಾನಿಸುವುದು, ಮಡದಿ-ಮಕ್ಕಳಿಗೆ ಬಟ್ಟೆಬರೆ, ಆಭರಣ ಇತ್ಯಾದಿ ಖರೀದಿಸಿಕೊಡುವುದು, ಬಗೆಬಗೆಯ ತಿಂಡಿತಿನಿಸುಗಳ ತಯಾರಿ ಹೀಗೆ ಹಬ್ಬದ ಸಡಗರದಲ್ಲಿ ಎಲ್ಲವೂ ಮರೆತುಹೋಗುತ್ತದೆ. ಆದರೆ ಎಂದಾದರೂ ಹಬ್ಬದ ಕೇಂದ್ರಬಿಂದುವಾದ ಜಗನ್ಮಾತೆಯನ್ನು ಮರೆಯುವುದುಂಟೆ? ''ಅಮ್ಮಾ, ನಿನ್ನ ಕೃಪೆಯಿಂದಾಗಿಯೇ ಈ ಬಾರಿ ಚೆನ್ನಾಗಿ ಫಸಲು ಬಂತು. ಇದೆಲ್ಲ ನನ್ನ ಕೈಯಿಂದ ಹೇಗೆ ಸಾಧ್ಯವಾದೀತು? ನೀನು ಕೊಟ್ಟದ್ದನ್ನೆಲ್ಲ ನಿನಗೇ ಅರ್ಪಿಸುತ್ತೇನೆ ತಾಯಿ. ಇದೇ ರೀತಿ ಮುಂದಿನ ವರ್ಷವೂ, ಅದರ ಮುಂದಿನ ವರ್ಷವೂ ಸುಖ-ಸಮೃದ್ಧಿಯನ್ನು ಕರುಣಿಸು ತಾಯೀ. ನಿನ್ನ ಕೃಪೆಯಿಲ್ಲದೆ ಒಂದು ಹುಲ್ಲುಕಡ್ಡಿಯಾದರೂ ಅಲುಗಾಡುವುದೆ? ನೀನು ಮುನಿದರೆ ಪ್ರವಾಹ, ಚಂಡಮಾರುತ, ರೋಗ, ಹಾನಿ ಎಲ್ಲವೂ ಬಂದುಬಿಡುವುದು. ಯಾವಾಗಲೂ ನಮ್ಮನ್ನು ಕಾಪಾಡುವ ತಾಯಿ, ನೀನೇ ಮುಂದೆಯೂ ನಮ್ಮನ್ನು ರಕ್ಷಿಸು'' ಎನ್ನುತ್ತ ಜಗನ್ಮಾತೆಯ ಮುಂದೆ ಕಣ್ಣೀರು ಹಾಕುತ್ತಾನೆ.

ಇದಕ್ಕೆ ವಿರುದ್ಧವಾಗಿ ಸಾವು, ನೋವು, ಅನಾಹುತ, ಹಾನಿ, ನಷ್ಟಗಳುಂಟಾದಾಗ ಅವನು ಮೌನವಾಗಿ ನಿಟ್ಟುಸಿರು ಬಿಡುತ್ತಿರುತ್ತಾನೆ. ಆ ವರ್ಷ ಅವನಿಗೆ ನವರಾತ್ರಿ ಹಬ್ಬವಿಲ್ಲ. ದೀಪಾವಳಿಯ ಸಡಗರವಿಲ್ಲ. ಕತ್ತಲೆ, ಬರಿಯ ಕತ್ತಲೆ. ಸುತ್ತಮುತ್ತ ಮನೆಗಳಲ್ಲಿ ಸಂಭ್ರಮದಿಂದ ದುರ್ಗಾಮಾತೆಯ ಹಬ್ಬ, ನೃತ್ಯ, ನಾಟಕಗಳು ನಡೆಯುತ್ತಿದ್ದರೆ ಈ ಮನೆಯಲ್ಲಿ ಮಾತ್ರ ಮೌನದ ಕಣ್ಣೀರು. ರೈತ ಮನದಲ್ಲೇ ಹೇಳಿಕೊಳ್ಳುತ್ತಾನೆ: ''ಅಮ್ಮಾ, ಕೊಡುವವಳೂ ನೀನೆ, ತೆಗೆದುಕೊಳ್ಳುವವಳೂ ನೀನೇ. ನಿನ್ನ ಕೃಪೆಯಾಗಲಿಲ್ಲ ಈ ಬಾರಿ. ನಾನೇನು ಮಾಡಬಲ್ಲೆ? ಇಂಥ ಶಿಕ್ಷೆ ನನಗೇಕೆ ತಾಯಿ? ಊರೆಲ್ಲೆಲ್ಲ ಜನರು ಆನಂದದಿಂದ ನರ್ತಿಸುತ್ತಿದ್ದರೆ ನನಗೆ ಮಾತ್ರ ಏಕೆ ದುಃಖ? ನಾನೇನು ತಪ್ಪನ್ನು ಮಾಡಿದೆ? ಆಗಲಿ, ನಿನ್ನಿಚ್ಛೆ ಇದ್ದಂತಾಗಲಿ. ನೀನಿತ್ತುದನ್ನು ಸಹಿಸಿಕೊಳ್ಳಲೇಬೇಕು. ಮುಂದಿನ ವರ್ಷವಾದರೂ ಆನಂದದಿಂದ ನಿನ್ನ ಹಬ್ಬವನ್ನು ಆಚರಿಸುವಂತಾಗಲಿ. ಇಷ್ಟೇ ನನ್ನ ಪ್ರಾರ್ಥನೆ'' — ಹೀಗೆ ಹೇಳುತ್ತ ಅವನ ಹೃದಯದ ಕಟ್ಟೆಯೊಡೆಯುತ್ತದೆ. ಭಾವಾರ್ದ್ರ ಹೃದಯದಿಂದ ತನ್ನ ಭಕ್ತಿ, ಭಾವನೆಯನ್ನು ಜಗನ್ಮಾತೆಯ ಮುಂದೆ ತೋಡಿಕೊಳ್ಳುತ್ತಾನೆ.

## ನಿತ್ಯ ಬದುಕಿನ ರಿಂಗಣ

ಪ್ರಪಂಚವೇ ಹಾಗೆ. ಬೇಕೆಂದು ಬಯಸಿದ್ದು ಸಿಗುವುದಿಲ್ಲ. ಬೇಡವೆಂದು ದೂರ ತಳ್ಳುವ ಸಂಗತಿಗಳು ಬಿಟ್ಟು ಹೋಗುವುದಿಲ್ಲ. ಇವುಗಳ ನಡುವೆ ವ್ಯಕ್ತಿ ಸುಖ, ದುಃಖಗಳೊಂದಿಗೆ ಮುಳುಗೇಳುತ್ತಾ ಸಾಗುತ್ತಾನೆ. ಸುಖವೆಂಬ ಮರೀಚಿಕೆಯ ಬೆನ್ನಟ್ಟಿ ಹೋಗುವ ನಿರಂತರ ಪ್ರಯಾಣವದು. ಈ ಪ್ರಯಾಣದಲ್ಲಿ ಒಂದೊಂದು ಘಟನೆ, ಒಂದೊಂದು ಕ್ರಿಯೆ ಕೂಡ ಒಂದು ಬಗೆಯ ರಿಂಗಣ, ಕೊನೆಯಿಲ್ಲದ ನರ್ತನ. ಅಲ್ಲಿ ನಲಿವಿದೆ, ಆಯಾಸವಿದೆ, ವೇದನೆಯಿದೆ; ಹಾಗೂ ಕೆಲವೊಮ್ಮೆ ನೀರಸವೆನಿಸುವ ಭಾವನೆಯಿದೆ. ಇವುಗಳ ನಡುವೆ ಎಲ್ಲೋ ಮಿಂಚಿ ಮರೆಯಾಗುವ ಕೆಲವು ಕ್ಷಣಗಳಲ್ಲಿ ನಮಗೆ ಅನಂತ ಬೆಳಕನ್ನು ಸೂಸುವ ಧ್ರುವನಕ್ಷತ್ರ ಗೋಚರಿಸುವುದು. ದೈವೀಭಾವ ಪ್ರೇರಿತವಾದ ಆಚರಣೆಗಳಿಂದಲೂ, ಸನ್ನಿವೇಶದ ಬಲದಿಂದ ವ್ಯಕ್ತಿಯಲ್ಲಿ ಮೂಡುವ ಭಕ್ತಿಭಾವನೆಯಿಂದಲೂ ಇಂಥ ಧನ್ಯ ಕ್ಷಣ ಭಾಸವಾಗಬಹುದು. ಲೌಕಿಕ ದ್ವಂದ್ವಗಳನ್ನು ಮೀರಿದ, ಇಂದ್ರಿಯಾತೀತ ಪ್ರಪಂಚದ ಈ ಒಂದು ಮಿಂಚನ್ನು ಯಾರು ಕಾಣಬಲ್ಲನೋ ಅವನು ಅದನ್ನೆಂದಿಗೂ ಮರೆಯುವುದಿಲ್ಲ.

ನವರಾತ್ರಿಯ ಆಚರಣೆಯ ಹಿಂದಿರುವ ದುರ್ಗಾಮಾತೆಯ ಕಥಾನಕವು, ಪೌರಾಣಿಕ ಚೌಕಟ್ಟಿನ ಪರಿಧಿಯನ್ನು ದಾಟಿ, ನಮ್ಮ ಮನಸ್ಸನ್ನು ದಾರ್ಶನಿಕ-ತಾತ್ತ್ವಿಕ ಭವ್ಯತೆಯ ನೆಲೆಗೆ ಏರಿಸುವಷ್ಟು ಶಕ್ತಿಶಾಲಿಯಾಗಿದೆ. ಯೋಗಿಗಳು, ಸಾಧಕರು, ಪ್ರಾಜ್ಞರು, ನಿರಕ್ಷರಕುಕ್ಷಿಗಳು, ಯಾವುದೇ ಮತ-ಪಂಥಕ್ಕೆ ಸೇರಿದವರು — ಎಲ್ಲರಿಗೂ ಈ ನೆಲೆಗೇರಬಹುದಾದ ಯೋಗ್ಯತೆಯಿದೆ; ಅದಕ್ಕೆ ಹಕ್ಕಿದೆ. ಆದರೆ ಯಾರು ಜಗನ್ಮಾತೆಯೆದುರು ಅದಕ್ಕಾಗಿ ಹೃದಯವನ್ನು ತೆರೆಯಬಲ್ಲರು ಎಂಬುದನ್ನು ಅದು ಅವಲಂಬಿಸಿದೆ.

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೩ | ಮಂಗಳವಾರ | ಏಕಾದಶಿ |
| ೨೩ | ಶುಕ್ರವಾರ | ಮಹಾಸಪ್ತಮಿ |
| ೨೪ | ಶನಿವಾರ | ಮಹಾಷ್ಟಮಿ |
| ೨೫ | ಭಾನುವಾರ | ಮಹಾನವಮಿ |
| ೨೬ | ಸೋಮವಾರ | ವಿಜಯದಶಮಿ<br>ಶ್ರೀ ಮಧ್ವ ಜಯಂತಿ |
| ೨೭ | ಮಂಗಳವಾರ | ಏಕಾದಶಿ |